**ದಿನಾಂಕ 16.10.2025 ರಂದು ಸಾಕ್ಷಿ ಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. H.L.A. ವಕೀಲರಿಂದ:**

ವಾದಿ ನನ್ನ ಚಿಕ್ಕಮ್ಮ. ಈ ದಾವೆಯನ್ನು ಕಾಳಮ್ಮ ನವರು ಸಿದ್ದೇಗೌಡ ಮತ್ತು ದೇವರಾಜು ಮೇಲೆ ಹಾಕಿರುತ್ತಾರೆ. ಈ ದಾವೆಯಲ್ಲಿ ವಾದಿಯು ಯಾವ ಪರಿಹಾರ ಕೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ಜಾಗವನ್ನು ಬಿಡಿಸಿಕೊಡುವಂತೆ ಪರಿಹಾರ ಕೇಳಿರುವುದಾಗಿ ನುಡಿಯುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನೇ ಹೇಳಿ ಬರೆಸಿರುವುದಾಗಿ ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆಸಿರುವಂತೆ ದಾವಾ ಸ್ವತಿನ ಹಳೆಯ ಸರ್ವೆ ನಂ. 67/25 ಆಗಿದ್ದು , ಹೊಸ ಸರ್ವೆ ನಂ. 307/223 ಆಗಿರುತ್ತದೆ. ಸದರಿ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 54 ಅಡಿ, ಉತ್ತರ ದಕ್ಷಿಣ 114 ಅಡಿ ಆಗಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ತಿಪ್ಪೇಗೌಡರ ಮನೆ , ಪಶ್ಚಿಮಕ್ಕೆ ಕಾಳಮ್ಮ, ದೇವರಾಜಮ್ಮ , ಸಿದ್ದೇಗೌಡ ಉ. ದೊಡ್ಡ ಮರಿಗೌಡರ ಮನೆ, ಉತ್ತರ -ದಕ್ಷಿಣಕ್ಕೆ ರಸ್ತೆ ಇರುತ್ತದೆ.

ದಾವಾ ಸ್ವತ್ತನ್ನು ವಾದಿ ದೊಡ್ಡ ಬಸವೇಗೌಡರಿಂದ ಖರೀದಿ ಮಾಡಿರುತ್ತಾರೆ. ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆದ ನನಗೆ ಗೊತ್ತಿಲ್ಲ , 50 ವರ್ಷ ಆಗಿರಬಹುದು. ಖರೀದಿ ಪತ್ರ ನೋಡಿರುತ್ತೇನೆ. ಪತ್ರದ ಒಕ್ಕಣೆಯಂತೆ ದಾವಾ ಸ್ವತ್ತಿನ ಪೂರ್ವ ಪಶ್ಚಿಮ , ಉತ್ತರ , ದಕ್ಷಿಣ ವಿಸ್ತೀರ್ಣ ಏನು ಎಂದು ತಿಳಿದುಕೊಂಡಿರುತ್ತೇನೆ. ಪೂರ್ವ -ಪಶ್ಚಿಮ 54 ಅಡಿ , ಉತ್ತರ -ದಕ್ಷಿಣ 114 ಅಡಿ ಆಗಿರುತ್ತದೆ. ನೀವು ಪತ್ರವನ್ನು ನೋಡದೆ ಸುಳ್ಳು ವಿಸ್ತೀರ್ಣ ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ರಸ್ತೆ ಅಗಲೀಕರಣ ಆಗಿದೆ ಎಂದರೆ ಸರಿ. ರಸ್ತೆ ಅಗಲೀಕರಣದ ನಂತರ 8 ಅಡಿ ಉತ್ತರ ದಿಕ್ಕಿನಲ್ಲಿ ರಸ್ತೆಗೆ ಹೋಗಿದೆ ಎಂದರೆ ಸರಿಯಲ್ಲ , 4 ಅಡಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. 4 ಅಡಿಗಿಂತ ಜಾಸ್ತಿ ಹೋಗಿದೆ , ನೀವು ವಾದಿಗೆ ಅನುಕೂಲ ವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕ ನಿಮ್ಮ ಮನೆ ಇದೆಯಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ವಾದಿಯ ಸ್ವಾಧೀನಕ್ಕೆ ಧಕ್ಕೆ ಮಾಡಿರುತ್ತಾರೆ ಎಂದು ಬರೆಸಲಾಗಿದೆ , ಯಾವಾಗ ಎಂದು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ನಾನು ಮತ್ತು ಗ್ರಾಮದ ಮುಖ್ಯಸ್ಥರು ಬುದ್ದಿ ಹೇಳಿರುವುದಾಗಿ ಹೇಳಲಾಗಿದೆ , ಯಾವ ಊರಿನ ಮುಖ್ಯಸ್ಥರು ಬುದ್ದಿವಾದ ಹೇಳಿರುತ್ತಾರೆ ಎಂದು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ . ದಾವಾ ಸ್ವತ್ತಿನ ಪಶ್ಚಿಮಕ್ಕೆ ಪ್ರತಿವಾದಿಗಳ ಮನೆ ಇದೆ ಎಂದರೆ ಸರಿ . ರಸ್ತೆ ಅಗಲೀಕರಣ ಆದ ನಂತರ ಪ್ರತಿವಾದಿಗಳ ಆಸ್ತಿಯನ್ನು ಹೊಡೆದು ಕೊಳ್ಳುವ ಉದ್ದೇಶದಿಂದ ವಾದಿಗಳು ಈ ಸುಳ್ಳು ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗಳು ದಾವಾ ಆಸ್ತಿಯಲ್ಲಿ ಪೂರ್ತಿ ಅನುಭವ ಇಲ್ಲದಿದ್ದರೂ ಸಹ ಅವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವ ವಿಚಾರ ವನ್ನು ನನಗೆ ವಾದಿ ಮತ್ತು ಪ್ರತಿವಾದಿಗಳು ಹೇಳಿರುತ್ತಾರೆ. ಸಾಕ್ಷಿ ಹೇಳಲು ನಿಮ್ಮನ್ನು ಯಾ ರು ಕರೆದುಕೊಂಡು ಬಂದಿರುತ್ತಾರೆ ಎಂದರೆ ನಾನೇ ಬಂದಿರುವುದಾಗಿ ನುಡಿಯುತ್ತಾರೆ. ವಾದಿಗೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ಕಂಡರೆ ನಿಮಗೆ ಆಗದಿರುವ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರ ಇಲ್ಲದಿದ್ದರೂ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ